ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

ZILLA PANCHAYAT OFFICE, BELGAUM-590002


ದೂರವಾಣಿ / Telephone: 0831-2407201, 0831-2407206, 0831-2431640

ಫ್ಯಾಕ್ಸ್/Fax: 0831-2429662

e-mail: ceozpbelgaum@yahoo.com


ಕ್ರಮಸಂ:ಜಿಪಂ:ಯೋವಿ:ವಸತಿ:ವಿವ196:2014-15

ದಿನಾಂಕ:30-6-2014

ಜಿಲ್ಲೆಯ ಎಲ್ಲ ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲೂಕಾ ಪಂಚಾಯತ ಇವರುಗಳಿಗೆ,

ವಿಷಯ: ಇಂದಿರಾ ಆವಾಸ ಮತ್ತು ಬಸವ ವಸತಿ ಯೋಜನೆಗಳಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ನಿರ್ಮಲ ಭಾರತ ಅಭಿಯಾನ ಯೋಜನೆಯಡಿಯಲ್ಲಿ ಶೌಚಾಲಯ ನಿರ್ಮಿಸಲು ಕಾಮಗಾರಿ ಆದೇಶ ನೀಡಿರುವ ಮಾಹಿತಿ ನೀಡುವ ಕುರಿತು.

ಉಲ್ಲೇಖ:ವ್ಯವಸ್ಥಾಪಕ ನಿರ್ದೇಶಕರು,ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಬೆಂಗಳೂರು ಇವರ ಪತ್ರ ಸಂ:MD RGRHCL 01 NBA 03 2014 ದಿನಾಂಕ:13-6-2014.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2013-14ನೇ ಸಾಲಿನ ಬಸವ ವಸತಿ ಯೋಜನೆ ಹಾಗೂ ಇಂದಿರಾ ಆವಾಸ ಯೋಜನೆಯಡಿ ಆಯ್ಕೆಯಾದ ಎಲ್ಲಾ ಫಲಾನುಭವಿಗಳಿಗೆ ನಿರ್ಮಲ ಭಾರತ ಅಭಿಯಾನ ಯೋಜನೆಯಲ್ಲಿ ಶೌಚಾಲಯಗಳನ್ನು ಮಂಜೂರು ಮಾಡಿ,ವಸತಿ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಕಾಮಗಾರಿ ಆದೇಶದೊಂದಿಗೆ ಶೌಚಾಲಯ ನಿರ್ಮಿಸಿಕೊಳ್ಳಲು ಪ್ರತ್ಯೇಕವಾದ ಕಾಮಗಾರಿ ಆದೇಶವನ್ನು ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಫಲಾನುಭವಿಗಳಿಗೆ ನೀಡವುದು ಒಂದು ವೇಳೆ ಈಗಾಗಲೇ ವಸತಿ ಯೋಜನೆಯಡಿಯಲ್ಲಿ ಕಾಮಗಾರಿ ಆದೇಶ ನೀಡಿದ್ದಲ್ಲಿ ಕೂಡಲೇ ಪ್ರತ್ಯೇಕವಾಗಿ ಗ್ರಾಮ ಪಂಚಾಯತಿಯಿಂದ ಶೌಚಾಲಯ ನಿರ್ಮಾಣಕ್ಕೆ ಕಾಮಗಾರಿ ನೀಡಲು ತಿಳಿಸಿರುತ್ತಾರೆ.ಶೌಚಾಲಯದ ಜಿ.ಪಿ.ಎಸ್ ಛಾಯಾಚಿತ್ರವನ್ನು ಅಳವಡಿಸಲು ಅನುಕೂಲವಾಗುವಂತೆ Mobile Software Version 3.4 ಅಭಿವೃದ್ಧಿ ಪಡಿಸಲಾಗಿದ್ದು,ಸದರಿ ಸಾಫ್ಟವೇರನ್ನು ಹೊಸದಾಗಿ ನಿಗಮದ ವೆಬ್ ಸೈಟನಿಂದ ನಮೂದಿಸಲು ಎಲ್ಲಾ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಲಾಗಿದ್ದರೂ ಸಹ ಯೋಜನೆಯಡಿಯಲ್ಲಿ ಮನೆಗಳು ಪೂರ್ಣಗೊಂಡಿದ್ದರೂ ಶೌಚಾಲಯದ GPS ಛಾಯಾಚಿತ್ರಗಳನ್ನು ನಿಗಮದ ವೆಬ್ ಸೈಟನಲ್ಲಿ ಅಳವಡಿಸಿರುವುದಿಲ್ಲದಿರುವುದು ಕಂಡು ಬಂದಿರುತ್ತದೆ.

ಆದ್ದರಿಂದ ಕೂಡಲೇ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕಾ ಪಂಚಾಯತ ಇವರು ತಮ್ಮ ತಾಲೂಕ ಮಟ್ಟದಲ್ಲಿ ಈ ಬಗ್ಗೆ ಪರಿಶೀಲಿಸಿ ಪ್ರಗತಿ ಚುರುಕುಗೊಳಿಸಲು ಮತ್ತು ಪೂರ್ಣಗೊಂಡ ಎಲ್ಲಾ ಮನೆಗಳಿಗೆ ಶೌಚಾಲಯದ ಜಿ.ಪಿ.ಎಸ್ ಛಾಯ ಚಿತ್ರಗಳನ್ನು ಅಳವಡಿಸಲು ಕ್ರಮಕೈಗೊಳ್ಳುವಂತೆ ಉಲ್ಲೇಖಿತ ಪತ್ರದಡಿ ನಿಗಮದವರು ಕೋರಿರುತ್ತಾರೆ.(ಪ್ರತಿ ಲಗತ್ತಿಸಿದೆ).ಹಾಗೂ2013-14 ನೇ ಸಾಲಿನ ಇಂದಿರಾ ಆವಾಸ ಯೋಜನೆ ಹಾಗೂ ಬಸವ ವಸತಿ ಯೋಜನೆಯಡಿ ಮುಕ್ತಾಯಗೊಂಡ ಮನೆಗಳ ವಿವರ ಈ ಪತ್ರದ ಜೋತೆ ಲಗತ್ತಿಸಿದ್ದು.ಪೂರ್ಣಗೊಂಡ ಮನೆಗಳಿಗೆ ಶೌಚಾಲಯದ ಜಿ.ಪಿ.ಎಸ್ ಛಾಯ ಚಿತ್ರಗಳನ್ನು ಅಳವಡಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

(ದೀಪಾ ಚೋಳನ್)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ ಬೆಳಗಾವಿ

## BASAV VASATI YOJANE-2013-14

| Sl.No. | District | Taluk | Target | Compiled |
|---|---|---|---|---|
| 1 | ಬೆಳಗಾವಿ | ಅಥಣಿ | 819 | 79 |
| 2 | ಬೆಳಗಾವಿ | ರಾಮದುರ್ಗ | 700 | 32 |
| 3 | ಬೆಳಗಾವಿ | ಬೈಲಹೊಂಗಲ | 1015 | 20 |
| 4 | ಬೆಳಗಾವಿ | ಸೌದತ್ತಿ | 839 | 11 |
| 5 | ಬೆಳಗಾವಿ | ಬೆಳಗಾವಿ | 956 | 18 |
| 6 | ಬೆಳಗಾವಿ | ಗೋಕಾಕ | 1019 | 82 |
| 7 | ಬೆಳಗಾವಿ | ಹುಕ್ಕೇರಿ | 1019 | 52 |
| 8 | ಬೆಳಗಾವಿ | ಚಿಕ್ಕೋಡಿ | 1228 | 69 |
| 9 | ಬೆಳಗಾವಿ | ಖಾನಾಪುರ | 989 | 32 |
| 10 | ಬೆಳಗಾವಿ | ರಾಯಬಾಗ | 629 | 20 |
| GRAND TOTAL: | | | 9213 | 415 |

## INDIRA AVAS YOJANE -2013-14

| Sl.No. | Taluk | Target | Compiled |
|---|---|---|---|
| 1 | ಅಥಣಿ | 1011 | 42 |
| 2 | ಸೌದತ್ತಿ | 680 | 9 |
| 3 | ರಾಮದುರ್ಗ | 370 | 11 |
| 4 | ಬೈಲಹೊಂಗಲ | 611 | 5 |
| 5 | ಹುಕ್ಕೇರಿ | 956 | 16 |
| 6 | ಬೆಳಗಾವಿ | 693 | 10 |
| 7 | ಗೋಕಾಕ | 962 | 34 |
| 8 | ರಾಯಬಾಗ | 718 | 16 |
| 9 | ಚಿಕ್ಕೋಡಿ | 930 | 12 |
| 10 | ಖಾನಾಪುರ | 303 | 2 |
| GRAND TOTAL: | | 7234 | 157 |